**ಎಂ.ವಿ.ಸಿ. 477/2023, ಪಿ.ಡಬ್ಲೂ-1 ಹೆಸರುಃ ಶಿವಕುಮಾರ**

**ದಿಃ22-04-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಎನ್.ಆರ್.ಪುರ ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 131/2022 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಅಮಾನತ್ತು ಪಂಚನಾಮೆ, ಶವ ತನಿಖಾ ವರದಿ, ಸಾಕ್ಷಿದಾರರ ಹೇಳಿಕೆಗಳು, ಶವ ಪರೀಕ್ಷಾ ವರದಿ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 10 ಎಂದು ಗುರುತಿಸಲಾಯಿತು. ಮೃತ ರತ್ನಮ್ಮರವರಿಗೆ ಸಂಬಂಧಿಸಿದ ವೇತನದ ಚೀಟಿಯನ್ನು ಹಾಜರುಪಡಿಸಿದ್ದು ನಿಪಿ.11 ಎಂದು ಗುರುತಿಸಲಾಯಿತು. ಮೃತ ರತ್ನಮ್ಮರವರಿಗೆ ಸಂಬಂಧಿಸಿದ ಸೇವಾ ವಹಿ ಪುಸ್ತಕದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು. ಮೃತ ರತ್ನಮ್ಮರವರಿಗೆ ಸಂಬಂಧಿಸಿದ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ನಿಪಿ.13 ಎಂದು ಗುರುತಿಸಲಾಯಿತು. ಮೃತ ರತ್ನಮ್ಮರವರಿಗೆ ಸಂಬಂಧಿಸಿದ ಆಧಾರ್ ಕಾರ್ಡನ್ನು ಹಾಜರುಪಡಿಸಿದ್ದು ನಿಪಿ.14 ಎಂದು ಗುರುತಿಸಲಾಯಿತು. ಮೃತ ರತ್ನಮ್ಮರವರಿಗೆ ಸಂಬಂಧಿಸಿದ ಪಾನ್ ಕಾರ್ಡ್‌ನ್ನು ಹಾಜರುಪಡಿಸಿದ್ದು ನಿಪಿ.15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

2. ಅಪಘಾತ ಏರ್ಪಟ್ಟಾಗ ನಾನು ಶಿವಮೊಗ್ಗದಲ್ಲಿ ಇದ್ದೆನು. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ಅಪಘಾತದ ನಂತರ ನನಗೆ ನನ್ನ ಸ್ನೇಹಿತರು ದೂರವಾಣಿ ಮೂಲಕ ತಿಳಿಸಿರುತ್ತಾರೆ. ಅಪಘಾತದ ಸಮಯದಲ್ಲಿ ನನ್ನ ಮೃತ ಪತ್ನಿ ಬಸ್ಸಿನಲ್ಲಿ ಹೋಗುತ್ತಿದ್ದರು. ಬಸ್ಸು ಮತ್ತು ಲಾರಿಯ ನಡುವೆ ಪರಸ್ಪರ ಡಿಕ್ಕಿಯಾಗಿ ಅಪಘಾತ ಏರ್ಪಟ್ಟಿರುತ್ತದೆ. ಅಪಘಾತಕ್ಕೆ ಒಳಪಟ್ಟ ಬಸ್ಸಿನ ಸಂಖ್ಯೆ ಕೆ.ಎ.18/ಸಿ-5088 ಇರುತ್ತದೆ. ಲಾರಿಯ ಸಂಖ್ಯೆ ಕೆ.ಎ 19-ಎ.ಬಿ.-3994 ಇರುತ್ತದೆ. ಈ ಮೇಲ್ಕಂಡ ವಾಹನಗಳ ನಡುವೆ ಅಪಘಾತ ಏರ್ಪಟ್ಟಿರುತ್ತದೆ ಎಂದು ನನ್ನ ಸ್ನೇಹಿತರು ತಿಳಿಸಿರುತ್ತಾರೆ. ಅಪಘಾತ ಈ ಮೇಲ್ಕಂಡ ಎರಡೂ ವಾಹನಗಳ ತಪ್ಪಿನಿಂದ ಏರ್ಪಟ್ಟಿರುತ್ತದೆ ಎಂದು ಹೇಳಿರುತ್ತಾರೆ. ಸೇತುವೆ

ಕಿರಿದಾಗಿದ್ದು, ಎರಡು ವಾಹನಗಳ ಚಾಲಕರುಗಳ ತಪ್ಪಿನಿಂದಾಗಿ ಅಪಘಾತ ಆಗಿರುವುದಾಗಿ ನನಗೆ ಮಾಹಿತಿ ಬಂದಿರುತ್ತದೆ. ಅಪಘಾತದ ನಂತರ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುತ್ತೇನೆ. ಅಪಘಾತದ ದಿನದಂದೆ ನನ್ನ ಮೃತ ಪತ್ನಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟರು ಎಂದು ತಿಳಿಯಿತು. ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದೇನೆ.

3. ನನ್ನ ಮೃತ ಪತ್ನಿ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದು, ಆರೋಗ್ಯ ಸಹಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ನನ್ನ ಪತ್ನಿ ಎನ್.ಆರ್.ಪುರ ತಾಲ್ಲೂಕಿನ ಗುತ್ತಿನಕೊಪ್ಪ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮಕ್ಕಳನ್ನು ನೋಡಿಕೊಂಡು ಶಿವಮೊಗ್ಗದಲ್ಲಿ ಇದ್ದೆನು. ನನಗೆ ಇಬ್ಬರು ಮಕ್ಕಳು. 3 ನೇ ಅರ್ಜಿದಾರರಿಗೆ ನನ್ನ ಮೃತ ಪತ್ನಿಯ ಕುರಿತಾಗಿ ಅನುಕಂಪದ ಆಧಾರದ ಉದ್ಯೋಗವನ್ನು ನೀಡಿರುತ್ತಾರೆ. ನನ್ನ ಮಗನಾದ 3 ನೇ ಅರ್ಜಿದಾರರು ಪ್ರಥಮ ಧರ್ಜೆ ಸಹಾಯಕರಾಗಿ ಆರೋಗ್ಯ ಇಲಾಖೆ, ಶಿವಮೊಗ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನನ್ನ ಮಗನಿಗೆ ರೂ.45,000/- ಮೂಲ ವೇತನ ಬರುತ್ತದೆ. ನನ್ನ ಮಗಳಾದ 2 ನೇ ಅರ್ಜಿದಾರರು ಬಿ.ಇ. ವ್ಯಾಸಂಗ ಮಾಡುತ್ತಿದ್ದಾಳೆ. ಶಿವಮೊಗ್ಗದ ಪೆಸೆಟ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಮಗಳು 1997 ರಲ್ಲಿ ಜನಿಸಿದ್ದಾಳೆ. ನನ್ನ ಮಗ ಬಿ.ಸಿ.ಎ. ವ್ಯಾಸಂಗ ಮಾಡಿದ್ದಾನೆ. ಬಿ.ಸಿ.ಎ. ವ್ಯಾಸಂಗ ಮುಗಿದು ಎರಡು ವರ್ಷಗಳಾಗಿದೆ. ನನ್ನ ಮಗನಿಗಿಂತ ನನ್ನ ಮಗಳು ಎರಡು ವರ್ಷಕ್ಕೆ ದೊಡ್ಡವಳು. ನನ್ನ ಮಗಳು ಈಗ ಬಿ.ಇ. ಅಂತಿಮ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಮಗಳ ವಿದ್ಯಾಭ್ಯಾಸ ಮುಗಿದಿದೆ ಎಂದರೆ ಸರಿಯಲ್ಲ. ನನ್ನ ಮಗಳ ವಿದ್ಯಾಭ್ಯಾಸದ ಕುರಿತು ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ನನ್ನ ಮಗಳ ವಿವಾಹ ಆಗಿದೆ. ಹೊಳಲ್ಕೆರೆ ತಾಲ್ಲೂಕಿನ ಅಪ್ಪರಸನಹಳ್ಳಿ ಗ್ರಾಮದವರಿಗೆ ಕೊಟ್ಟು ವಿವಾಹ ಮಾಡಿರುತ್ತೇನೆ. ನನ್ನ ಅಳಿಯ ಬಿ.ಇ. ವ್ಯಾಸಂಗ ಮಾಡಿದ್ದು, ಇನ್ನೂ ಕೆಲಸ ಸಿಕ್ಕಿಲ್ಲ. ನನ್ನ ಮಗಳು ಆಕೆಯ ಪತಿಯೊಂದಿಗೆ ಇದ್ದಾಳೆ. ನಮ್ಮ ಕುಟುಂಬಕ್ಕೆ ನಂದನಹೊಸೂರು ಗ್ರಾಮದಲ್ಲಿ 5 ಎಕರೆ ಜಮೀನು ಇದೆ. ನನ್ನ ಮಗನಿಗೆ ನನ್ನ ಮೃತ ಪತ್ನಿಯ ಮರಣದ ಕುರಿತು ಅನುಕಂಪದ ಆಧಾರದಲ್ಲಿ ನೌಕರಿ ನೀಡಿದ್ದು, ಹಾಗಾಗಿ ನನ್ನ ಮೃತ ಪತ್ನಿಯ ಕಾರಣದಿಂದ ನಮಗೆ ಯಾವುದೇ ಹಾನಿ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ವಿವಾಹವಾಗಿದ್ದು, ಹಾಗಾಗಿ ಆಕೆಗೂ ಕೂಡ ನನ್ನ ಪತ್ನಿಯ ಮರಣದಿಂದ ಯಾವುದೇ ಹಾನಿಯಾಗಿಲ್ಲ ಎಂದರೆ ಸರಿಯಲ್ಲ. ನಾವು ನನ್ನ ಮೃತ ಪತ್ನಿಯ ಆಧಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕುರಿತು ಮಹಿತಿ ಇಲ್ಲದಿದ್ದಾಗ್ಯೂ, ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4 ನೇ ಎದುರುದಾರರ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ _